5.	ಹೈದರಾಬಾದ್ ಎಂಡೋಮೆಂಟ್ ರೆಗ್ಯುಲೇಷನ್ ಫಸಲಿ 1849 (ಹಳೇ ಹೈದರಾಬಾದ್ ಪ್ರಾಂತ್ಯದ 3 ಜಿಲ್ಲೆಗಳು)	9,361
	ಒಟ್ಟು	43,217

ರಾಜ್ಯಾದ್ಯಂತ ಇರುವ ಧಾರ್ಮಿಕ ಸಂಸ್ಥೆಗಳ ಆಸ್ತಿತಕ್ಕೆ ಒಂದೇ ಕಾಯಿದೆಯನ್ನು ಜಾರಿಗೆ ತರುವಲ್ಲಿ ಕರೆದು ವಿಕರೂಪ ಶಾಸನವನ್ನು ತರಲಾಗಿದ್ದು, ಇದರ ಸಾಧಕ ಮತ್ತು ಬಾಧಕವನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ.

3. ಕರ್ನಾಟಕ ಮಹಾನಗರ ಪಾಲಿಕೆಗಳಲ್ಲಿ ವೈಜ್ಞಾನಿಕ ರೀತಿಯಲ್ಲಿ ಮನೆಗಂದಾಯ ನಿಗದಿ.

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ): ಕರ್ನಾಟಕ ರಾಜ್ಯದ ನಗರಸಭೆ ನಗರಪಾಲಿಕೆಗಳ ಮನೆಗಂದಾಯ ವೈಜ್ಞಾನಿಕವಾಗಿ ನಿಗದಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಮನೆಗಂದಾಯ ನಿಗದಿ ಮಾಡಲು ಸರ್ಕಾರ ಏನಾದರೂ ಸಮಿತಿ ಮಾಡಿದೆಯೇ ಮಾಡಿದ್ದರೆ ಆ ಸಮಿತಿ ಎಷ್ಟು ಸಾರಿ ಸಭೆ ಸೇರಿತ್ತು? ಆ ಸಮಿತಿ ವರದಿ ಕೊಟ್ಟಿದೆಯೆ? ಮನೆಗಂದಾಯ ನಿಗದಿ ಮಾಡಲು ತುರ್ತುಕ್ರಮ ಏನು ಕೈಗೊಳ್ಳುವಿರಿ?

ಶ್ರೀ ಚೌಡರೆಡ್ಡಿ: (ನಗರಾಭಿವೃದ್ಧಿ ಸಚಿವರು) ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಹೇಳಿಕೆಯನ್ನು ಕೊಡಬಯಸುತ್ತೇನೆ.

ಕರ್ನಾಟಕ ಪುರಸಭೆ ಕಾಯ್ದೆ 1964 ಹಾಗೂ ಕರ್ನಾಟಕ ಮಹಾನಗರಪಾಲಿಕೆ ಕಾಯ್ದೆ 1976ಗಳಲ್ಲಿ ಮನೆಗಂದಾಯವನ್ನು ವಸೂಲು ಮಾಡಲು ಸ್ಥಿರವಾದ ಪದ್ಧತಿಯನ್ನು ತಿಳಿಸಿಲ್ಲ. ಈ ಒಂದು ಲೋಪದೋಷದ ಮೂಲಕ ಮನೆಗಂದಾಯ ವಸೂಲಾತಿಯಲ್ಲಿ ನಾಗರೀಕರು ತೊಂದರೆಗೊಳಗಾಗುತ್ತಿದ್ದುದನ್ನು ಗಮನಿಸಿ ದಿನಾಂಕ : 16.5.1990ರಂದು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ನೇಮಿಸಲಾಗಿತ್ತು. ಈ ಸಮಿತಿಯು ದಿನಾಂಕ : 23.6.1990, 30.6.90 ಹಾಗೂ 2.5.1991ರಂದು ಸಭೆ ಸೇರಿ ವಿವರವಾಗಿ ಚರ್ಚಿಸಿದ ನಂತರ ದಿನಾಂಕ : 3.10.1991ರಂದು ತನ್ನ ವರದಿಯನ್ನು ನೀಡಿದೆ. ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ. ಈ ಬಗ್ಗೆ ಸಾಧ್ಯವಾದಷ್ಟು ಬೇಗ ಅಂತಿಮ ನಿರ್ಧಾರ ತೆಗೆದುಕೊಂಡು ನಾಗರೀಕರ ತೊಂದರೆಯನ್ನು ನಿವಾರಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

4. ಶಿಕಾರಿಪುರ ಸಾರ್ವಜನಿಕ ಆಸ್ಪತ್ರೆಗೆ ವೈದ್ಯಾಧಿಕಾರಿಗಳ ನೇಮಕ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅಧ್ಯಕ್ಷರೆ, ಶಿಕಾರಿಪುರ ನಗರದ ಜನರಲ್ ಆಸ್ಪತ್ರೆಯಲ್ಲಿ ಮಂಜೂರು ಆಗಿರುವ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು? ಯಾವ್ಯಾವ ಹುದ್ದೆ ಖಾಲಿಯಿದೆ. ಖಾಲಿ ಇದ್ದರೆ ಇದನ್ನು ಯಾವಾಗ ಭರ್ತಿ ಮಾಡಿಕೊಳ್ಳಲಾಗುವುದು? ಕಳೆದ 2 ವರ್ಷಗಳಲ್ಲಿ ವೈದ್ಯಾಧಿಕಾರಿಗಳಿಲ್ಲದೆ ತಾಲ್ಲೂಕಿನ ಜನತೆಗೆ ಏನು ತೊಂದರೆಯಾಗಿದೆ ಈ ಬಗ್ಗೆ ಸರ್ಕಾರದ ಹೇಳಿಕೆಯನ್ನು ಬಯಸುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ: (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ಸಾರ್ವಜನಿಕ ಆಸ್ಪತ್ರೆಗೆ ಈ ಕೆಳಕಂಡ ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿರುತ್ತದೆ.

1. ಉಪಶಸ್ತ್ರ ಚಿಕಿತ್ಸಕರು	- 1
2. ಸಹಾಯಕ ಶಸ್ತ್ರ ಚಿಕಿತ್ಸಕರುಗಳು	- 2
3. ಸಹಾಯಕ ದಂತ ಶಸ್ತ್ರ ಚಿಕಿತ್ಸಕರುಗಳು	- 1

ಉಪಶಸ್ತ್ರ ಚಿಕಿತ್ಸಕರ ಹುದ್ದೆಯು ಸ್ತ್ರೀರೋಗತಜ್ಞರ ಹುದ್ದೆಯಾಗಿದ್ದು, ಇದು ದಿನಾಂಕಃ 25-3-91ರಂದು ಮಂಜೂರಾಗಿರುತ್ತದೆ. ಅಂದಿನಿಂದ ಈ ಹುದ್ದೆಯು ಖಾಲಿ ಇರುತ್ತದೆ. ಸಹಾಯಕ ಶಸ್ತ್ರ ಚಿಕಿತ್ಸಕರುಗಳಿಗೆ ಉಪಶಸ್ತ್ರ ಚಿಕಿತ್ಸಕರುಗಳನ್ನಾಗಿ ಬಡ್ತಿ ನೀಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಇವರುಗಳಿಗೆ ಉಪ ಶಸ್ತ್ರ ಚಿಕಿತ್ಸಕರುಗಳನ್ನಾಗಿ ಬಡ್ತಿ ನೀಡಲು ತೀರ್ಮಾನವನ್ನು ಕೈಗೊಂಡ ನಂತರ ಸಾರ್ವಜನಿಕ ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಯನ್ನು ಭರ್ತಿ ಮಾಡಲು ಕ್ರಮವನ್ನು ಕೈಗೊಳ್ಳಲಾಗುವುದು.

ಈ ಆಸ್ಪತ್ರೆಗೆ ಮಂಜೂರಾದ ಸಹಾಯಕ ಶಸ್ತ್ರ ಚಿಕಿತ್ಸಕರುಗಳ ಹುದ್ದೆಗಳ ಪೈಕಿ ಪುರುಷ ವೈದ್ಯಾಧಿಕಾರಿಯಾದ ಡಾಃ ವೀರಭದ್ರಪ್ಪ ಇವರು ದಿನಾಂಕಃ 11-6-91ರಿಂದ ಸೇವೆ ಸಲ್ಲಿಸುತ್ತಿದ್ದು ಅವರು ವರ್ಗಾವಣೆ ಹೊಂದಿದ ಕಾರಣ ಹುದ್ದೆಯು ಖಾಲಿ ಇರುತ್ತದೆ. ಇವರ ಜಾಗಕ್ಕೆ ರಜಾ ಮಾಸಲಾತಿ ವೈದ್ಯಾಧಿಕಾರಿಯಾದ ಡಾಃ ಎಂ. ಸಿ. ಹುಲ್ಲಮನಿ ಇವರನ್ನು ನೇಮಿಸಲಾಗಿದ್ದು ದಿನಾಂಕಃ 27-7-92ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಮಹಿಳಾ ವೈದ್ಯಾಧಿಕಾರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಡಾಃಜಿ. ರತ್ನಮ್ಮ ಇವರು ಸ್ನಾತಕೋತ್ತರ ವ್ಯಾಸಂಗಕ್ಕೆ ಆಯ್ಕೆಯಾಗಿ ಬಿಡುಗಡೆ ಹೊಂದಿದ ಕಾರಣ ದಿನಾಂಕಃ 12-8-92ರಿಂದ ಹುದ್ದೆಯು ಖಾಲಿ ಇರುತ್ತದೆ. ದಂತಶಸ್ತ್ರ ಚಿಕಿತ್ಸಕರ ಹುದ್ದೆಯು ಜುಲೈ 86ರಿಂದ ಖಾಲಿ ಇರುತ್ತದೆ.

ಖಾಲಿ ಇರುವ ಪುರುಷ ಹಾಗೂ ಮಹಿಳಾ ಶಸ್ತ್ರ ಚಿಕಿತ್ಸಕರುಗಳ ಹುದ್ದೆಗಳನ್ನು ಸ್ನಾತಕೊತ್ತರ ವ್ಯಾಸಂಗಕ್ಕೆ ತೆರಳಿದ ಕೆಲವು ಸಹಾಯಕ ಶಸ್ತ್ರಚಿಕಿತ್ಸಕರುಗಳು ತಮ್ಮ ವ್ಯಾಸಂಗವನ್ನು ಪೂರೈಸಿ ಈ ತಿಂಗಳ ಅಂತ್ಯದಲ್ಲಿ ವಾಪಸ್ ಬರಲಿದ್ದು ನೇಮಕಾತಿ ಆದೇಶವನ್ನು ನೀಡುವಾಗ ಶಿಕಾರಿಪುರ ಆಸ್ಪತ್ರೆಯಲ್ಲಿ ಖಾಲಿ ಇರುವ ಸಹಾಯಕ ಶಸ್ತ್ರ ಚಿಕಿತ್ಸಕರುಗಳ ಹುದ್ದೆಗಳನ್ನು ಆದ್ಯತೆಯ ಮೇರೆಗೆ ಭರ್ತಿ ಮಾಡಲಾಗುವುದು. ಅಲ್ಲದೆ ಖಾಲಿ ಇರುವ ಸಹಾಯಕ ದಂತಶಸ್ತ್ರ ಚಿಕಿತ್ಸಕರ ಹುದ್ದೆಯನ್ನು ಒಂದು ತಿಂಗಳ ಒಳಗಾಗಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಶಾಸನ ರಚನಾ ಕಾರ್ಯಕಲಾಪಗಳು

ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ 1993 (ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಶ್ರೀರಂಗದೇವರಾಯಲು: (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, 1993ನೇ ಸಾಲಿನ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡಬೇಕೆಂದು ಕೋರುತ್ತೇನೆ.